# ಪ್ರಥಮ್ ಮೈಸೂರು

**ವಿದ್ಯಾಪೋಷಕ, ಧಾರವಾಡ**

**ಇವರ ಸಹಯೋಗದೊಂದಿಗೆ**

| ಕಛೇರಿಯ ಉಪಯೋಗಕ್ಕಾಗಿ ಮಾತ್ರ |
|---|
| ಅರ್ಜಿ ಸ್ವೀ. ದಿನಾಂಕ : ____________ ಸಹಿ ________ |
| ಅರ್ಜಿ ಕ್ರ.ಸಂ. ________ **NMT Seat No.** ________ |
| ಮನೆ ಭೇಟಿ ಅರ್ಹತೆ : ಹೌದು ☐ ಇಲ್ಲ ☐ |

**ಸೂಚನೆಗಳು** :

## ಧನ ಸಹಾಯಕ್ಕಾಗಿ ವಿದ್ಯಾರ್ಥಿ ಮಾಹಿತಿ ಪತ್ರ 2010-11

- ಈ ಮಾಹಿತಿ ಪತ್ರವನ್ನು ಭರ್ತಿ ಮಾಡುವ ಪೂರ್ವದಲ್ಲಿ ಹಿಂದಿನ ಪುಟದಲ್ಲಿರುವ ನಿಬಂಧನೆಗಳನ್ನು ಓದಿರಿ.
- 2010 ಮಾರ್ಚ್/ಏಪ್ರಿಲ್ ತಿಂಗಳಲ್ಲಿ S.S.L.C. ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಮಾತ್ರ.
- ಈ ಪತ್ರದಲ್ಲಿರುವ ಮಾಹಿತಿಯನ್ನು ವಿದ್ಯಾರ್ಥಿಗಳು ಸ್ವ ಹಸ್ತಾಕ್ಷರದಿಂದ ತುಂಬಿ **ನೇರವಾಗಿ ಪ್ರಥಮ್ ಮೈಸೂರಿಗೆ** ಕಳುಹಿಸಬೇಕು.
- ಒಂದು ಹಾಳೆಯ ಮೇಲೆ ನಿಮಗೆ ಆರ್ಥಿಕ ಸಹಾಯದ ಅವಶ್ಯಕತೆಯನ್ನು ಸಮರ್ಥಿಸಿ ಬರೆದು, **ಲಗತ್ತಿಸಿರಿ.**
- ಅರ್ಜಿಯ ಜೊತೆಗೆ ಸ್ವ-ವಿಳಾಸ ಬರೆದ ಪೋಸ್ಟ್ ಕಾರ್ಡ್‌ನ್ನು **ಲಗತ್ತಿಸಬೇಕು.**
- ಇದು ಕೇವಲ ಮಾಹಿತಿ ಪತ್ರ, ಧನ ಸಹಾಯದ ಅರ್ಜಿ ಅಲ್ಲ.
- ಈ ಮಾಹಿತಿ ಪತ್ರದ ಜೆರಾಕ್ಸ್ ಪ್ರತಿಯನ್ನು ತಮ್ಮ ಬಳಿ ಇಟ್ಟುಕೊಳ್ಳಬೇಕು.

**ಫೋಟೋ ಅಂಟಿಸಬೇಕು**

ನೀವು ನರ್ಚರ್ ಮೆರಿಟ್ ಪರೀಕ್ಷೆಯನ್ನು (NMT) ಬರೆಯುವ ಭಾಷೆ(✓) : ಕನ್ನಡ ☐ ಇಂಗ್ಲೀಷ್ ☐

1) ವಿದ್ಯಾರ್ಥಿ/ ನಿಯ ಹೆಸರು : ______________________________

2) ಕಲಿಯುತ್ತಿರುವ ಶಾಲೆಯ ಹೆಸರು ಮತ್ತು ವಿಳಾಸ : ______________________________

3) ಮಾರ್ಚ್/ಏಪ್ರಿಲ್ 2010 ರ ಎಸ್.ಎಸ್.ಎಲ್.ಸಿ ಪರೀಕ್ಷೆಯ ನೋಂದಣಿ ನಂ. (ಸೀಟ್ ನಂ.) : ☐☐☐☐☐☐☐☐☐☐☐☐☐

4) ಪ್ರೌಢಶಾಲಾ ಶಿಕ್ಷಣ ಮಾಧ್ಯಮ : ಕನ್ನಡ ☐ ಇಂಗ್ಲೀಷ್ ☐ ಇತರೆ ನಮೂದಿಸಿರಿ ☐

5) ಪಾಲಕರ ಹೆಸರು ಮತ್ತು ವಿವರವಾದ ವಿಳಾಸ : ______________________________

______________________________

______________________________

______________________________

6) ಕುಟುಂಬದ ವಿವರಗಳು : ಒಟ್ಟು ಸದಸ್ಯರ ಸಂಖ್ಯೆ : ________________

| | ಸದಸ್ಯರ ಹೆಸರು | ಕೆಲಸ ಮತ್ತು ಕೆಲಸ ಮಾಡುವ ಸ್ಥಳದ ವಿಳಾಸ | ವಾರ್ಷಿಕ ಆದಾಯ |
|---|---|---|---|
| ತಂದೆ | | | |
| ತಾಯಿ | | | |
| ಇನ್ನಿತರರು | | | |
| **ಸಂಸ್ಥೆಯವರೇ ಖುದ್ದಾಗಿ ಬಂದು ನಿಮ್ಮ ಕುಟುಂಬದ ಆದಾಯ ಪರಿಗಣಿಸುವುದರಿಂದ ನೈಜ ಆದಾಯ ಬರೆಯಿರಿ. ಆದಾಯ ಪ್ರಮಾಣ ಪತ್ರದಲ್ಲಿ ಇದ್ದಂತೆಯೇ ಇರಬೇಕೆಂದೇನಿಲ್ಲ** | | ಒಟ್ಟು | |

7) ಕುಟುಂಬದ ಆಸ್ತಿಯ ವಿವರಗಳು :

ಕೃಷಿ ಭೂಮಿ, ಒಟ್ಟು ಎಕರೆ ________ ಒಣ ಭೂಮಿ ________ ನೀರಾವರಿ ________ ತೋಟ ________

ಬೆಳೆಯುವ ಬೆಳೆಗಳು : ಮುಂಗಾರು ____________ ಹಿಂಗಾರು ____________ ಇತರೆ ________

ಮನೆ : ಸ್ವಂತದ್ದು ☐ ಬಾಡಿಗೆಗೆ ☐ ತಿಂಗಳ ಬಾಡಿಗೆ ಎಷ್ಟು? ____________

ವಾಹನಗಳು : ಇದೆ ☐ ಇಲ್ಲ ☐ ಇದ್ದರೆ ಅದರ ವಿವರ ____________

ಇನ್ನಿತರ ಆಸ್ತಿಗಳ ವಿವರ ಹಾಗೂ ಮೌಲ್ಯ : ______________________________

8) ಕಳೆದ ವರ್ಷ ಬೇರೆ ಮೂಲಗಳಿಂದ ಧನ ಸಹಾಯ ಪಡೆದಿದ್ದೀರಾ? ಹೌದು ☐ ಇಲ್ಲ ☐ ಹೌದಾದರೆ ಎಷ್ಟು ರೂ. ☐

**ಮೇಲೆ ನೀಡಿದ ಮಾಹಿತಿ ಸರಿಯಾಗಿದ್ದು, ಸಂಸ್ಥೆಯ ಎಲ್ಲ ನಿಬಂಧನೆಗಳಿಗೆ ನಾನು ಸ್ವಇಚ್ಛೆಯಿಂದ ಒಪ್ಪಿದ್ದೇನೆ.**

ದಿನಾಂಕ :

ಸ್ಥಳ :

ವಿದ್ಯಾರ್ಥಿಯ ಸಹಿ

**ಪ್ರಥಮ್ ಮೈಸೂರು ಹಾಗೂ ವಿದ್ಯಾಪೋಷಕ, ಧಾರವಾಡ ಇವರ ಸಹಯೋಗದೊಂದಿಗೆ**
**ನರ್ಚರ್ ಮೆರಿಟ್ ಯೋಜನೆಯಡಿಯಲ್ಲಿ ಅರ್ಹ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಧನ ಸಹಾಯ ಯೋಜನೆ**

# ನಿಬಂಧನೆಗಳು

1) ಮಾರ್ಚ್/ಏಪ್ರಿಲ್ **2010** ರ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತಿದ್ದು, ಮೊದಲನೇ ಪ್ರಯತ್ನದಲ್ಲಿ **70%** ಕಡಿಮೆ ಇಲ್ಲದಂತೆ ಫಲಿತಾಂಶ ಪಡೆಯುವ ಭರವಸೆಯುಳ್ಳ ವಿದ್ಯಾರ್ಥಿಗಳು ಈ ಅರ್ಜಿಯನ್ನು ಹಾಕಲು ಅರ್ಹರು. ಅರ್ಹ ವಿದ್ಯಾರ್ಥಿಗಳು, ಸಂಸ್ಥೆಯಿಂದ ನಡೆಸುವ ನರ್ಚರ್ ಮೆರಿಟ್ ಪರೀಕ್ಷೆಗೆ ನಿಗದಿ ಪಡಿಸಿದ ತಮ್ಮ ಸಮೀಪದ ಪರೀಕ್ಷಾ ಕೇಂದ್ರದಲ್ಲಿ ಕಡ್ಡಾಯವಾಗಿ ಹಾಜರಿರಬೇಕು. ಪರೀಕ್ಷಾ ಕೇಂದ್ರ, ದಿನಾಂಕ, ಸಮಯ ಮತ್ತು ನೋಂದಣಿ ಸಂಖ್ಯೆಯನ್ನು ಪತ್ರದ ಮೂಲಕ ತಮಗೆ ತಿಳಿಸಲಾಗುವುದು.

2) ನರ್ಚರ್ ಮೆರಿಟ್ ಪರೀಕ್ಷೆಯನ್ನು ಎಸ್.ಎಸ್.ಎಲ್.ಸಿ ಫಲಿತಾಂಶ ಬಂದ ಅಂದಾಜು 15 ದಿನಗಳಲ್ಲಿ ಒಂದು ಭಾನುವಾರ ನಡೆಸಲಾಗುತ್ತದೆ.

3) ವಿದ್ಯಾರ್ಥಿಗಳು ಈ ಕೆಳಗಿನ ದಾಖಲಾತಿಗಳನ್ನು ಪರೀಕ್ಷಾ ಕೇಂದ್ರಕ್ಕೆ ತರಬೇಕು. ಅ) ಈ ಮಾಹಿತಿ ಪತ್ರದ ಎರಡೂ ಪುಟಗಳ ಜೆರಾಕ್ಸ್ ಪ್ರತಿ, ಆ) ಸಂಸ್ಥೆಯಿಂದ ಕಳುಹಿಸಿದ ಪತ್ರ ಹಾಗೂ ಇ) ಎಸ್.ಎಸ್.ಎಲ್.ಸಿ. ಪರೀಕ್ಷೆಯ ಹಾಲ್‌ಟಿಕೆಟ್‌ನ ಮೂಲ ಪ್ರತಿ.

4) ನರ್ಚರ್ ಮೆರಿಟ್ ಪರೀಕ್ಷೆ ಮುಗಿದ 7 ದಿನದೊಳಗೆ ಪಲಿತಾಂಶ ಪ್ರಕಟಿಸಲಾಗುವುದು.

5) ನರ್ಚರ್ ಮೆರಿಟ್ ಪರೀಕ್ಷೆಯಲ್ಲಿ ಹತ್ತನೆ ತರಗತಿಯ ಪಠ್ಯಕ್ರಮ ಆಧಾರಿತ ಗಣಿತ, ವಿಜ್ಞಾನ ಹಾಗೂ ಸಮಾಜ ವಿಜ್ಞಾನದ ಪ್ರತಿ ವಿಷಯಗಳಲ್ಲಿ 1 ಅಂಕಗಳ 10 ಪ್ರಶ್ನೆಗಳಿರುತ್ತವೆ. ಸಾಮಾನ್ಯ ಮಾನಸಿಕ ಸಾಮರ್ಥ್ಯ ವಿಷಯದಲ್ಲಿ 1 ಅಂಕಗಳ 20 ಪ್ರಶ್ನೆಗಳು ಹಾಗೂ ಸಾಮಾನ್ಯ ಇಂಗ್ಲೀಷಿನ 1 ಅಂಕಗಳ 10 ಪ್ರಶ್ನೆಗಳಿರುತ್ತವೆ.

6) ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳ ಪಾಲಕರು ಮೈಸೂರು ಜಿಲ್ಲೆಯಲ್ಲಿ ವಾಸಿಸುತ್ತಿರಬೇಕು. ವಿದ್ಯಾರ್ಥಿಗಳು ಮಾಹಿತಿ ಪತ್ರವನ್ನು ತುಂಬಿಸಿ ಅರ್ಜಿಯನ್ನು **ಪ್ರಥಮ್ ಮೈಸೂರು, ನಂ. 113/A, ದೇವಸ್ಥಾನ ರಸ್ತೆ, ಜಯಲಕ್ಷ್ಮೀಪುರಂ, ಸೇಂಟ್ ಜೋಸೆಫ್ ಕಾನ್ವೆಂಟ್ ಶಾಲೆಯ ಎದುರಿಗೆ, ಮೈಸೂರು – 570 012**. ಇಲ್ಲಿಗೆ ಕಳುಹಿಸಬೇಕು.

7) ನಿಮ್ಮ ಅರ್ಜಿ ತಲುಪಲು ಕೊನೆಯ ದಿನಾಂಕ : **15 ನೇ ಏಪ್ರಿಲ್ (ಗುರುವಾರ) 2010**

8) ಶೇಕಡ 70 % ಅಂಕಗಳನ್ನು ಪಡೆದು ತೇರ್ಗಡೆಯಾದ ವಿದ್ಯಾರ್ಥಿಗಳ ಕುಟುಂಬದ ಆರ್ಥಿಕ ಬಡತನವನ್ನು ಸಂಸ್ಥೆಯವರೇ ಸ್ವತ: ಮನೆಗೆ ಭೇಟಿ ಕೊಟ್ಟು ನಿರ್ಧರಿಸುತ್ತಾರೆ. ನರ್ಚರ್ ಮೆರಿಟ್ ಪರೀಕ್ಷೆಯಲ್ಲಿ ಅಂತಿಮವಾಗಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಮಾತ್ರ ಧನ ಸಹಾಯವನ್ನು ನೀಡಲಾಗುವುದು. ನಿಜವಾದ ಆರ್ಥಿಕ ಕಷ್ಟವಿದ್ದಲ್ಲಿ ಮಾತ್ರ ಅರ್ಜಿಯನ್ನು ಹಾಕಿರಿ. ಈ ಮೂಲಕ ನಿಮ್ಮ/ನಮ್ಮ ಶ್ರಮವನ್ನು ದಯವಿಟ್ಟು ಉಳಿಸಿರಿ. ಕುಟುಂಬದ ಒಟ್ಟು ವಾರ್ಷಿಕ ಆದಾಯ ರೂ. **40,000/–**ಕ್ಕಿಂತ ಕಡಿಮೆ ಇರಬೇಕು.

9) ಸಂಪೂರ್ಣ ಮಾಹಿತಿ ಇಲ್ಲದ / ತಪ್ಪು ಮಾಹಿತಿ ಹೊಂದಿರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

10) ಯಾವುದೇ ರೀತಿಯ ಮಧ್ಯಸ್ಥಿಕೆ ಅನರ್ಹತೆಗೆ ಕಾರಣವಾಗುತ್ತದೆ. ಸ್ವೀಕೃತಗೊಂಡ ಅರ್ಜಿಗಳಿಗೆ ಧನಸಹಾಯ ಮಂಜೂರಿ ಮಾಡುವ ಅಧಿಕಾರ ಸಂಸ್ಥೆಯ ಆಡಳಿತ ಮಂಡಳಿಯದ್ದಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಯಾವುದೇ ಪತ್ರ ವ್ಯವಹಾರ/ ಶಿಫಾರಸ್ಸಿಗೆ ಆಸ್ಪದವಿರುವುದಿಲ್ಲ.

11) ಈ ಧನ ಸಹಾಯ ಯೋಜನೆಯನ್ನು ಉದಾರ ದಾನಿಗಳ ನೆರವಿನಿಂದ ಕಲ್ಪಿಸಲಾಗುತ್ತಿದೆ. ಸಂಸ್ಥೆಗೆ ಬರುವ ಹಣಕಾಸಿನ ನೆರವನ್ನು ಆಧರಿಸಿ ಎಷ್ಟು ಜನ ವಿದ್ಯಾರ್ಥಿಗಳಿಗೆ ಧನ ಸಹಾಯ ನೀಡಬಹುದೆಂದು ನಿರ್ಧರಿಸಲಾಗುವುದು. ಕನಿಷ್ಠ ಅರ್ಹತೆಯೊಂದೇ ಧನ ಸಹಾಯ ಪಡೆಯಲು ಆಧಾರವಲ್ಲ.

12) ಸಂಸ್ಥೆಯಿಂದ ಧನ ಸಹಾಯ ಪಡೆದ ವಿದ್ಯಾರ್ಥಿಗಳು ಅಗತ್ಯಬಿದ್ದಲ್ಲಿ ಸಂಸ್ಥೆಯ ಸ್ವಯಂ ಸೇವಕರಾಗಿ ಸೇವೆ ಸಲ್ಲಿಸಲು ಸಿದ್ಧರಿರಬೇಕು.

**ಸೂಚನೆ :** a) ಪ್ರೌಢಶಾಲಾ ಮುಖ್ಯಸ್ಥರು ತಮ್ಮ ಶಾಲೆಯಿಂದ ಗರಿಷ್ಠ **5** ವಿದ್ಯಾರ್ಥಿಗಳ ಅರ್ಜಿಗಳನ್ನು ಅವರ ನಿಜವಾದ ಆರ್ಥಿಕ ಅವಶ್ಯಕತೆಯನ್ನು ಗಣನೆಗೆ ತೆಗೆದುಕೊಂಡು ಶಿಫಾರಸ್ಸು ಮಾಡಬಹುದು. ಆದರೆ ವಿದ್ಯಾರ್ಥಿಗಳೇ ಅರ್ಜಿಯನ್ನು ನೇರವಾಗಿ ಸಂಸ್ಥೆಗೆ ಕಳುಹಿಸಿ ಕೊಡಬೇಕು.

b) ಈ ಮಾಹಿತಿ ಪತ್ರದ ಜೆರಾಕ್ಸ್ ಪ್ರತಿಯನ್ನು ಉಪಯೋಗಿಸಬಹುದು ಅಥವಾ ಸಂಸ್ಥೆಯ ವೆಬ್‌ಸೈಟ್ **www.prathammysore.org** ದಿಂದ ಕೂಡಾ ಉಚಿತವಾಗಿ ಡೌನ್ ಲೋಡ್ ಮಾಡಿಕೊಂಡು ಸಂಸ್ಥೆಗೆ ಸಲ್ಲಿಸಬಹುದು.